
# ಉದ್ಯೋಗ ಪರ್ವ

## ಶ್ರೀ ನಾಗೇಶ ಬಾಬುರಾವ್ ಶೆಟ್ಟಿ ಅವರ

## ಅಭಿನಂದನ ಗ್ರಂಥ



ಸಂಪಾದಕರು

- ಡಾ. ಎಸ್. ಟಿ. ಮೇರವಾಡೆ
- ಡಾ. ಆರ್. ಪಿ. ಪಾಟೀಲ

## ಪರಿವಿಡಿ


- ಶುಭ ಸಂದೇಶಗಳು v-xv
- ಸಂಪಾದಕರ ನುಡಿ xvii

**ಭಾಗ-೧ ಪರಿವಾರ ಪರ್ವ**

೧. ಶೆಟ್ಟಿಯವರ ಪರಿವಾರ ೩
• ಡಾ. ಎಸ್. ಟಿ. ಮೇರವಾಡೆ

೨. ವ್ಯಕ್ತಿತ್ವ ದರ್ಶನ ೯
• ನಾಗೇಶ ಬಾಬುರಾವ್ ಶೆಟ್ಟಿ

೩. ಮಾತೃ ನುಡಿ ೧೧
• ಶ್ರೀಮತಿ ಲಲಿತಾ ಬಾಬುರಾವ್ ಶೆಟ್ಟಿ

೪. ಬಾಳೊಂದು ಭಾವಗೀತೆ ೧೩
• ಶ್ರೀಮತಿ ಸವಿತಾ ನಾಗೇಶ ಶೆಟ್ಟಿ

೫. ಸರಳ ಸ್ವಭಾವದ ಭಾವ ೧೫
• ಶ್ರೀಮತಿ ಸುನಿತಾ ಚಂದ್ರಕಾಂತ ಶೆಟ್ಟಿ

೬. Nagesh Ji: A Banyan Tree of the Family ೧೭
• **Smt. Arundhati Sharatkumar Shetty**

೭. पिता समान जेठजी ೧೮
• **श्रीमती पद्मा श्रीकांत शेट्टी**

೮. Being the 1st boy baby of the family he was the most pampered kid. ೨೦
• **Meenakshi Vijaykumar Hegde**

೯. ಇಪ್ಪಡ ಬುಡಿ ನಾಗೇಶಣ್ಣ ೨೨
• ಜ್ಯೋತಿ ಸುರೇಂದ್ರ ಶೆಟ್ಟಿ

೧೦. ನನ್ನ ಅಣ್ಣ ಓದಿದ್ದಕ್ಕಿಂತಲೂ ರೇಡಿಯೋ ಕೇಳಿದ್ದೇ ಜಾಸ್ತಿ ೨೩
• ಗೀತಾ ದಯಾನಂದ ಶೆಟ್ಟಿ

೧೧. ನಗು-ನಗುತಾ ಸಮಸ್ಯೆಗಳನ್ನು ಬಗೆಹರಿಸುವ ನಾಗೇಶ ಅಣ್ಣ ೨೪
• ಶ್ರೀಮತಿ ಸುಜಾತಾ ಅವಿನಾಶ ಶೆಟ್ಟಿ

# ಶೆಟ್ಟಿಯವರ ಪರಿವಾರ

• ಡಾ. ಎಸ್. ಟಿ. ಮೇರವಾಡೆ

**ಕಾ**ರ್ಕಳ ತಾಲೂಕಿನ ಬಜಗೋಳಿ ಗ್ರಾಮದಲ್ಲಿ ದಿ. ೨೪-೪-೧೯೩೦ರಂದು ಜನಿಸಿದ ದಿ. ಕೆ. ಬಾಬುರಾವ್ ಅಂತಪ್ಪ ಶೆಟ್ಟಿ ಅವರು ಅತಿ ಬಡತನದಲ್ಲಿಯೇ ಬಾಲ್ಯವನ್ನು ಕಳೆದವರು. ೮-೧೦ ವರ್ಷದವರಿದ್ದಾಗಲೇ ಉಪಜೀವನಕ್ಕಾಗಿ ದಿ. ಶ್ರೀನಿವಾಸ ಶೆಟ್ಟಿ ಅವರೊಂದಿಗೆ ಬೆಂಗಳೂರಿಗೆ ಹೋಗಿ ಅಲ್ಲಿ ಆಶ್ರಯ ಸಿಗಲಾರದೆ, ವಿಜಯಪುರಕ್ಕೆ ಬಂದರು. ಹೈಕ್ಲಾಸ್ ಹೋಟೆಲನಲ್ಲಿ ಕ್ಲೀನರ್, ಸಪ್ಲಾಯರ್ ಕೆಲಸ ಮಾಡಿ; ಕೆಲ ದಿನಗಳ ನಂತರ ಇಂಡಿ ರಸ್ತೆಯಲ್ಲಿ ಶ್ರೀ ವಿಜಯಕುಮಾರ ಘಾಟಗೆ ಅವರ ಅಂಗಡಿ ಬಾಡಿಗೆ ಪಡೆದು ಹೋಟೆಲ್ ಆರಂಭಿಸಿದರು. ಆ ಹೋಟೆಲ್ ವ್ಯಾಪಾರ ಸರಿಯಾಗಿ ನಡೆಯಲಿಲ್ಲಾ ಆಗ ಬಾಬುರಾವ್ ಅವರು ಜಿಗುಪ್ಸೆಗೊಂಡು ಆಧ್ಯಾತ್ಮದ ಕಡೆ ಒಲವು ತೋರತೊಡಗಿದರು. ಶ್ರೀ ಸೀತಾರಾಮ ಗಣಪಯ್ಯ ಕಾರಂತ ಅವರ ಮುಖಾಂತರ ಮೈಸೂರ ರೆಸ್ಟೋರೆಂಟ್ ತಿಂಗಳಿಗೆ ೭೫ರೂ ಬಾಡಗಿಯಂತೆ ಪಡೆದು ವ್ಯವಹಾರ ಆರಂಭಿಸಿದರು. ಕಷ್ಟಪಟ್ಟು ಮೈಸೂರ ರೆಸ್ಟೋರೆಂಟ ಒಳ್ಳೆಯ ಮಟ್ಟಕ್ಕೆ ತಂದರು. ಮುಂದಿನ ದಿನಗಳಲ್ಲಿ ಅಂದರೆ ಜೀವನದ ಕೊನೆಯವರೆಗೂ ಅವರಿಗೆ ಮೈಸೂರ ರೆಸ್ಟೋರೆಂಟ ಕಾಮಧೇನು ಆಯಿತು.

೧೯೫೫ರಲ್ಲಿ ಕಾರ್ಕಳ ತಾಲೂಕಿನ ಮುಂಡ್ಕೂರು ಗ್ರಾಮದ ಪಂಜ ಮೊಗಪಾಡಿ ಗುತ್ತು ನವರಾದ ವರಪ್ಪಾಡಿ ಮೂಲಸ್ಥಾನದ ದಿ. ಶ್ರೀಮತಿ ಮೋನು ಶೆಟ್ಟಿ ಹಾಗೂ ದಿ. ಐತಪ್ಪಾ ಶೆಟ್ಟಿ ಇವರ ಸುಪುತ್ರಿಯಾದ ಸೌ. ಲಲಿತಾ ಇವರೊಂದಿಗೆ ಮದುವೆಯಾಯಿತು. ಶಿವಾಜಿ ಸರ್ಕಲ್ ಹತ್ತಿರವಿರುವ ಕಾಳಿಕಾದೇವಿ ದೇವಸ್ಥಾನದ ಹತ್ತಿರ ಬಾಡಿಗೆ ಮನೆಯಲ್ಲಿ ತಮ್ಮ ಕೌಟುಂಬಿಕ ಜೀವನ ಆರಂಭಿಸಿದರು. ವಿಜಯಪುರಕ್ಕೆ ಬಂದ ಎರಡು ವರ್ಷಗಳ ನಂತರ ನಾಗೇಶ ಅವರ ಜನನವಾಯಿತು ನಂತರ ಮೀನಾಕ್ಷಿ ಹೀಗೆ ೪ ಜನ ಗಂಡು ಮಕ್ಕಳು, ೫ ಜನ ಹೆಣ್ಣು ಮಕ್ಕಳು ಒಟ್ಟು ೯ ಜನ ಮಕ್ಕಳೊಂದಿಗೆ ತುಂಬು ಕುಟುಂಬವಾಯಿತು. ಬಾಬುರಾವ್ ಶೆಟ್ಟಿಯವರು ಎಲ್ಲ ಮಕ್ಕಳಿಗೆ ವಿದ್ಯಾಭ್ಯಾಸ ನೀಡಿ ಗಂಡು ಮಕ್ಕಳಿಗೆ ಉದ್ಯೋಗದ ಒಳ್ಳೆಯ ಮಾರ್ಗದರ್ಶನ ನೀಡಿ ತಮ್ಮ ಕರ್ತವ್ಯವನ್ನು ಪಾಲಿಸಿದ್ದಾರೆ.

೭-೫-೧೯೯೨ ರಂದು ಕಾರ್ಕಳ ತಾಲೂಕಿನ ದಾಮ್ನಕಟ್ಟೆಯ ಶ್ರೀ ಜಯರಾಮ ನಾಗಪ್ಪ ಶೆಟ್ಟಿ ಹಾಗೂ ಶ್ರೀಮತಿ ಶಾಂತಾ ಜಯರಾಮ ಶೆಟ್ಟಿ ಇವರ ಸುಪುತ್ರಿಯಾದ ಸವಿತಾ ಇವಳೊಂದಿಗೆ ನಾಗೇಶ ಇವರ ವಿವಾಹ ಮಾಡಿದರು. ವಿವಾಹವಾದ ಒಂದೇ ವರ್ಷದಲ್ಲಿ ನಾಗೇಶ ಹಾಗೂ ಸವಿತಾ ಇವರಿಗೆ ಸಂತಾನ ಪ್ರಾಪ್ತಿಯಾಯಿತು. ೧೯೯೩ರಲ್ಲಿ 'ಸಂದೇಶ', ೧೯೯೭ರಲ್ಲಿ 'ಸುಮನ' ಇವರ ಜನ್ಮವಾಯಿತು. ಆರತಿಗೊಬ್ಬ ಮಗಳು ಕೀರ್ತಿಗೊಬ್ಬ ಮಗ ಎಂಬಂತೆ ಎರಡು ಮಕ್ಕಳ ಪಾಲನೆ ಪೋಷಣೆ ಮಾಡಿದ್ದಾರೆ. ಸಂದೇಶರನ್ನು ಬಿ.ಬಿ.ಎ ಪದವಿ ವರೆಗೆ ಓದಿಸಿ ನಾಗೇಶ ಅವರು ತಮ್ಮ ಉದ್ಯೋಗದಲ್ಲಿ ಕರೆತಂದರು. ಇಂದು ಸಂದೇಶ ತಮ್ಮ ತಂದೆಯವರೊಂದಿಗೆ ಮೈಸೂರ ರೆಸ್ಟೋರೆಂಟ ವ್ಯವಹಾರ ನೋಡಿಕೊಳ್ಳುತ್ತಿದ್ದಾನೆ. ಮಗಳು ಡಾಕ್ಟರ್ ಆಗಲೇಬೇಕು ಎಂಬ ಛಲದಿಂದ ಅಧ್ಯಯನ ಮಾಡಲು ಬೆಂಗಳೂರಿನಲ್ಲಿ ಇದ್ದಾಳೆ.

ನಾಗೇಶ ಅವರು ಹೋಟೆಲ್‌ಗೆ ಬಂದ ಗ್ರಾಹಕರಿಗೆ ತೃಪ್ತಿಯಾಗಬೇಕು ಜೊತೆಗೆ ತಂದೆಯವರು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಯಾವ ಕಳಂಕ ಬರದಂತೆ ಇರಬೇಕು. ಎಂಬ ವಿಚಾರದಿಂದ ವ್ಯವಹಾರ ನೋಡಿಕೊಳ್ಳುತ್ತಿದ್ದಾರೆ. ಇವರ ಹವ್ಯಾಸವೆಂದರೆ ಸಿನೇಮಾ ನೋಡುವದು (ಇತ್ತೀಚಿನ ದಿನಗಳಲ್ಲಿ ಆ ಹವ್ಯಾಸ ಕಡಿಮೆಯಾಗಿದೆ) ಸ್ನೇಹಿತರಿಗೆ ಪ್ರೀತಿಯಿಂದ ಊಟ ಮಾಡಿಸುವದು ತಮಗೆ ಚಂದ ಕಂಡ ಅರಿವೆಗಳನ್ನು ತೆಗೆದುಕೊಳ್ಳುವದು ಯಾವಾಗಲೂ ನಗು-ನಗುತ್ತಾ ಇರುವದು.

ಎರಡನೆಯ ಮಗಳಾದ ಸೌ. ಮೀನಾಕ್ಷಿ ಇವರ ವಿವಾಹವು ದಿ ೧೨-೧೦-೧೯೮೭ ರಂದು ಉಡುಪಿ ಜಿಲ್ಲೆಯ ಶಿವಳ್ಳಿ ಗ್ರಾಮದ ಶ್ರೀ ವಿಜಯಕುಮಾರ ಹೆಗ್ಡೆ ಇವರೊಂದಿಗೆ ಜರುಗಿತು. ಈ ದಂಪತಿಗಳಿಗೆ ಒಂದು ಹೆಣ್ಣು ಮಗು, ಒಂದು ಗಂಡು ಜನನವಾದವು; ಮೊದಲನೆಯ ಮಗಳಾದ ಕುಮಾರಿ ಚೈತ್ರ ಇವಳು ಬಿ.ಬಿ.ಎಂ., ಎಲ್‌ಎಲ್.ಬಿ.ವರೆಗೂ ಅಭ್ಯಾಸ ಮಾಡಿದ್ದಾಳೆ. ಮಗ ಮೋಹಕರಾಜ ಬಿ.ಬಿ.ಎಂ ವರೆಗೂ ಓದಿ ತಮ್ಮ ತಂದೆಯವರ ಕೈಗಾರಿಕೆಯ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಕುಮಾರಿ ಚೈತ್ರಾ ಅವಳಿಗೆ ಅಖಿಲ ಭಾರತ 'ಭಂಟರ ಸಮಾಜ' ಬೆಂಗಳೂರು ಅವರು ಒಳ್ಳೆಯ ಕಾನೂನು ವಿದ್ಯಾರ್ಥಿನಿ ಅಂತಾ ಗುರ್ತಿಸಿ ಪ್ರಶಸ್ತಿ ನೀಡಿದ್ದಾರೆ. ಶ್ರೀ ವಿಜಯಕುಮಾರ ಹೆಗ್ಡೆ ಒಬ್ಬ ಒಳ್ಳೆಯ ಸಂಶೋಧಕರು, ಪರಿಸರ ರಕ್ಷಣೆಯಲ್ಲಿ ವಿಶೇಷ ಸಂಶೋಧನೆಯನ್ನು ಮಾಡಿದ್ದಾರೆ. ಅದರ ಬಗ್ಗೆ ಲೇಖನಗಳು ದಿನಪತ್ರಿಕೆಯುಲ್ಲಿ ಪ್ರಕಟವಾಗಿವೆ. ಅವರ ಸಂಶೋಧನೆಯೆಂದರೆ-ವಿದ್ಯುತ್, ವಾಹನ, ರೈಲು ಮತ್ತು ಅಡುಗೆ ಅನಿಲ ಇವುಗಳಿಂದ ಆಗುತ್ತಿರುವ ಪರಿಸರ ಹಾನಿ.

ವಿದ್ಯುತ್ ಉತ್ಪಾದನೆಗಾಗಿ ಕಲ್ಲಿದ್ದಲು ಹಾಗೂ ಇನ್ನಿತರ ಉರುವಲುಗಳ ಬದಲಿಗೆ ಸಮುದ್ರದ ಅಲೆಗಳಿಂದ ವಿದ್ಯುತ್ ಉತ್ಪಾದನೆ ಮಾಡುವ ಬಗ್ಗೆ ಸಂಶೋಧನೆ ನಡೆಸಿದ್ದಾರೆ. ಅದರಿಂದ ಭಾರತಕ್ಕೆ ಬೇಕಾಗುವ ವಿದ್ಯುತ್ ಉತ್ಪಾದಿಸಬಹುದು ಎಂಬುದು ಅವರ ವಿಚಾರ.

**ವಾಹನ ಹಾಗೂ ರೈಲು :** ವಾಹನ ಹಾಗೂ ರೈಲುಗಳಿಗೆ ಬಳಸುವ ಡೀಸೆಲ್ ಬಳಕೆ ಕಡಿಮೆ ಮಾಡಲು ಬ್ಯಾಟರಿ ಸ್ವತಃ ಚಾರ್ಜಿಂಗ ಪದ್ಧತಿಯ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಇದರಿಂದ ೨/೩ ಭಾಗ ಡಿಸೆಲ್ ಉಳಿತಾಯ ಮಾಡಬಹುದು ಎಂಬುದು ಅವರ ಮಾತು.

**ಅಡುಗೆ ಅನಿಲ :** ಹೋಟೆಲ್‌ಗಳಲ್ಲಿ ಬಳಿಕೆಯಾಗುವ ಅಡುಗೆ ಅನಿಲ ೬೦%ರಷ್ಟು ಉಳಿಸಬಹುದು. ಅದರಿಂದ ದೇಶಕ್ಕೆ ೧ ಲಕ್ಷ ಸಾವಿರ ಕೋಟಿ ಉಳಿತಾಯವಾಗುವುದು. ಪರಿಸರ ರಕ್ಷಣೆ ಇವರ ಮುಖ್ಯ ಉದ್ದೇಶ. ದೇಶಕ್ಕೆ ಬೇಕಾಗುವ ಆಹಾರ ಪದಾರ್ಥಗಳ ಉತ್ಪಾದನೆಯ ಬಗ್ಗೆ ಯೋಜನೆ, ರೈತರಿಗೆ ಮಾರ್ಗದರ್ಶನ, ಸರ್ಕಾರಕ್ಕೆ ಯೋಜನಾ ವರದಿ ಈ ಕಾರ್ಯಗಳಲ್ಲಿ ನಿರಂತರವಾಗಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ.

ಬಾಬುರಾವ್ ಶೆಟ್ಟಿ ಅವರ ಮೂರನೆಯ ಚಿರಂಜೀವಿ ಚಂದ್ರಕಾಂತ ಶೆಟ್ಟಿ. ಆತ್ಮವಿಶ್ವಾಸದಿಂದ ಬದುಕುವ ಚಂದ್ರಕಾಂತ ಅವರು ಬಿ.ಕಾಂ. ಪದವಿಧರರು. ಮನೆತನದ ಉದ್ಯೋಗವನ್ನೇ ಮುಂದುವರಿಸಿಕೊಂಡು ದಿವಂಗತ ಶ್ರೀ ಬಿ. ಎಂ. ಪಾಟೀಲ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಕೆಲವು ದಿನಗಳ ಕಾಲ ಕ್ಯಾಂಟಿನ ನಡೆಸಿದರು. ಮುಂದೆ ತಂದೆಯವರು ನಡೆಸುತ್ತಿದ್ದ ಹೋಟೆಲ ಲಲಿತ ಮಹಲ್‌ದ ಪೂರ್ಣ ಜವಾಬ್ದಾರಿ ಪಡೆದು. ಅಂದಿನಿಂದ ಇಂದಿಗೂ ಹೋಟೆಲ ವ್ಯವಹಾರ ನೋಡಿಕೊಳ್ಳುತ್ತಿದ್ದಾರೆ. ಹೋಟೆಲ್ ಲಲಿತ ಮಹಲ್ ಬಹಳ ಸಂಘ ಸಂಸ್ಥೆಗಳಿಗೆ ಆಶ್ರಯ ನೀಡಿದೆ. ಅದನ್ನು ಇಂದು ಉನ್ನತ ಮಟ್ಟದಲ್ಲಿ ನಡೆಸುತ್ತಿದ್ದಾರೆ. ಫೆಬ್ರುವರಿ ೨೧, ೧೯೯೬ ರಂದು ಧಾರವಾಡದ ದಿ. ಗೋವಿಂದ ಶೆಟ್ಟಿ ಹಾಗೂ ಶ್ರೀಮತಿ ಗಿರಿಜಾ ಇವರ ಸುಪುತ್ರಿಯಾದ ಸುನಿತಾ ಇವರನ್ನು ಬಾಳಸಂಗಾತಿಯಾಗಿ ಸ್ವೀಕರಿಸಿ, ಶ್ರೇಯಸ್ಸ್ ಹಾಗೂ ಸಿಂಚನಾ ಎರಡು ಮಕ್ಕಳಿಗೆ ಜನ್ಮ ನೀಡಿದ್ದಾರೆ. ಶ್ರೇಯಸ್ಸ್ ಡಿಪ್ಲೋಮಾ ಅಭ್ಯಾಸಿಸುತ್ತಿದ್ದಾನೆ. ಸಿಂಚನಾ ಎಸ್.ಎಸ್.ಎಲ್.ಸಿ. ತರಗತಿಯಲ್ಲಿ ಓದುತ್ತಿದ್ದಾಳೆ. ವಿಜಯಪುರದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಕಾರ್ಯಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಸಮಾಜ ಸೇವೆ ಮಾಡುತ್ತಿರುವ ಅಪರೂಪದ ವ್ಯಕ್ತಿ ಚಂದ್ರಕಾಂತ ಅವರು. ಪ್ರಾಮಾಣಿಕತೆ ಮೃದು ಸ್ವಭಾವ, ಸಹೃದಯ ಇವರ ವಿಶೇಷತೆಗಳು. ಕರ್ನಾಟಕ ಘನ ಸರ್ಕಾರದ ಜಲಸಂಪನ್ಮೂಲ ಸಚಿವರು ಹಾಗೂ ವಿಜಯಪುರ ಜಿಲ್ಲಾ ಉಸ್ತುವಾರಿ ಸಚಿವರಾದ ಮಾನ್ಯ ಶ್ರೀ ಎಂ. ಬಿ. ಪಾಟೀಲಜಿ ಅವರ ಅನುಯಾಯಿಗಳು. ಕರ್ನಾಟಕ ಪ್ರದೇಶ ಕಾಂಗ್ರೆಸಿನ ಸದಸ್ಯರಾಗಿ ಗುರುತರವಾದ ಸೇವೆಗಳನ್ನು ಮಾಡಿದ್ದಾರೆ, ಸದ್ಯ ವಿಜಯಪುರ ನಗರಾಭಿವೃದ್ದಿ ಪ್ರಾಧಿಕಾರದ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ನಾಲ್ಕನೆಯವಳಾದ ಸೌ. ಜ್ಯೋತಿ ಇವಳ ವಿವಾಹವು ಉಡುಪಿ ತಾಲೂಕಿನ ಹೇರೂರ ಗ್ರಾಮದ ಶ್ರೀ ಸುರೇಂದ್ರ ಮಹಾಬಲ ಶೆಟ್ಟಿ ಇವರೊಂದಿಗೆ ದಿನಾಂಕ ೨೮-೦೫-೧೯೯೮ ರಂದು ಆಯಿತು. ಶ್ರೀ ಸುರೇಂದ್ರ ಶೆಟ್ಟಿಯವರ ಉದ್ಯೋಗ ವ್ಯಾಪಾರ. ಪುಸ್ತಕ ಓದುವ ಹವ್ಯಾಸದವರು. ಇವರಿಗೆ ಎರಡು ಮಕ್ಕಳು ಚಿ. ವಿಕಾಸ ಈತನು ಪಿ.ಡಬ್ಲ್ಯೂ.ಡಿ. ಗುತ್ತಿಗೆದಾರ. ಮಗಳು ಸುಶ್ಮಿತಾ ಎಂ.ಬಿ.ಬಿ.ಎಸ್. ಓದಿದ್ದಾಳೆ.

ಐದನೆಯವಳಾದ ಸೌ. ಗೀತಾ ಇವಳ ವಿವಾಹವು ದಕ್ಷಿಣ ಕನ್ನಡ ಜಿಲ್ಲೆಯ ಮೂಡುಪೆರಾರ ಗ್ರಾಮದ ಶ್ರೀ ದಯಾನಂದ ಸೀನಾ ಶೆಟ್ಟಿಯವರೊಂದಿಗೆ ದಿ. ೨೫-೧೨-೧೯೯೪ ರಂದು ಜರುಗಿತು. ಇವರಿಗೆ ತೇಜಸ್ ಹಾಗೂ ಪ್ರಜ್ವಲ್ ಎರಡು ಗಂಡು ಮಕ್ಕಳು ತೇಜಸ್ ಬಿ.ಇ. (ಸಿವ್ಹಿಲ್) ಓದುತ್ತಿದ್ದಾನೆ. ಪ್ರಜ್ವಲ್ ಡಿಪ್ಲೋಮಾ ಅಭ್ಯಾಸಿಸುತ್ತಿದ್ದಾನೆ. ಈ ದಂಪತಿಗಳ ಹವ್ಯಾಸ ಓದುವದು ಹಾಗೂ ಚೆಸ್ ಆಟ.

ಆರನೆಯವರಾದ ಶ್ರೀ ಶರತಕುಮಾರ ಶೆಟ್ಟಿ ಬಿ.ಎ. ಅಭ್ಯಾಸ ಮುಗಿಸಿದ ನಂತರ ಐದಾರು ವರ್ಷ ಸಹೋದರ ಶ್ರೀ ನಾಗೇಶ ಅವರೊಂದಿಗೆ ಮೈಸೂರ ರೆಸ್ಟೋರೆಂಟ ವ್ಯವಹಾರ ನೋಡಿಕೊಂಡರು.

ಉಡುಪಿಯ ಶ್ರೀ ಜಯಕರ ವಿಠ್ಠಲ ಶೆಟ್ಟಿ ಮತ್ತು ಶ್ರೀಮತಿ ಸರಳಾ ಇವರ ಪುತ್ರಿಯಾದ ಸೌ. ಅರುಂಧತಿಯೊಂದಿಗೆ ದಿ. ೧೫-೨-೨೦೦೨ರಲ್ಲಿ ಅತಿ ಸರಳ ರೀತಿಯಲ್ಲಿ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರನ ಸನ್ನಿಧಾನದಲ್ಲಿ ವಿವಾಹವಾಯಿತು. ಅವರಿಗೆ ಒಂದು ಹೆಣ್ಣು, ಒಂದು ಗಂಡು, ಎರಡು ಮಕ್ಕಳು. ಕುಮಾರಿ ಸ್ವಾತಿ ಮಹೇಶ್ವರಿ ೫ನೇಯ ತರಗತಿಯಲ್ಲಿ ಕುಮಾರ ಯೋಗೇಶ್ವರಾ ಈತನು ೨ನೇಯ ತರಗತಿಯಲ್ಲಿ ಓದುತ್ತಿದ್ದಾನೆ. ಶರತಕುಮಾರ ಅವರು ಶ್ರಮಯೇವ ಜಯತೆ ಎಂಬ ತತ್ವದವರು. ಕಠಿಣ ಪರಿಶ್ರಮ, ಏನಾದರೂ ಸಾಧಿಸಬೇಕು; ಎಂಬ ಛಲದವರು. ಪ್ರಯತ್ನವಾದಿಯಾದ ಇವರು ಹೋಟೆಲ್ ಉದ್ಯೋಗದಿಂದ ರಿಯಲ್ ಎಸ್ಟೇಟ್ ಉದ್ಯೋಗದಲ್ಲಿ ಹೋಗಿ ಅಲ್ಲಿ ತಮ್ಮದೇ ಆದ ಕನಸು ಕಟ್ಟಿಕೊಂಡವರು. ಎಸ್ಟೇಟದ ಉದ್ಯೋಗ ಆರಂಭಿಸಿದ್ದು ಗಚ್ಚಿನಕಟ್ಟಿ ಕಾಲೋನಿಯ ಹತ್ತಿರವಿರುವ ಲಲಿತ ಇಂದ್ರಾ ವಿಹಾರ ಕಾಲೋನಿ, ನಂತರ ವಿಜಯಪುರದ ಮಾರ್ಕೆಟ ಪಕ್ಕದಲ್ಲಿರುವ ಕೃಷ್ಣಾ ಕಾಂಪ್ಲೇಕ್ಸ, ವಿಜಯಪುರ ಹೃದಯ ಭಾಗದಲ್ಲಿ ಇರುವ ಸಿಟಿ ಸೆಂಟರ ಕಾಂಪ್ಲೇಕ್ಸ ಹೀಗೆ ಒಂದರ ಮೇಲೊಂದರಂತೆ ಎತ್ತರಕ್ಕೆ ಏರಿದವರು.

ಏಳನೆಯವರಾದ ಶ್ರೀ ಶ್ರೀಕಾಂತ ಶೆಟ್ಟಿ ಬಿ.ಇ. ಪದವಿಧರರು. ಮಹಾರಾಷ್ಟ್ರದ ಇಚಲಕರಂಜಿ ಶಹರದ ಶ್ರೀ ಸೀತಾರಾಮ ಶೆಟ್ಟಿ ಹಾಗೂ ಶ್ರೀಮತಿ ಚಂದ್ರಕಲಾ ಇವರ ಸುಪುತ್ರಿಯಾದ ಸೌ. ಪದ್ಮಾ ಇವಳೊಂದಿಗೆ ದಿನಾಂಕ ೨೧-೪-೨೦೦೬ರಲ್ಲಿ

ವಿಜಯಪುರದಲ್ಲಿ ಕಂದಗಲ್ ಹಣಮಂತರಾಯ ಮಂದಿರದಲ್ಲಿ ವಿವಾಹ ವಿಜೃಂಭಣೆಯಿಂದ ಜರುಗಿತು, ಅವರಿಗೆ ಕುಮಾರಿ ರೇವಾ ಹಾಗೂ ಕುಮಾರಿ ಭವ್ಯಶ್ರೀ ಎರಡು ಹೆಣ್ಣು ಮಕ್ಕಳಿದ್ದಾರೆ. ರೇವಾ ೩ ನೆಯ ತರಗತಿಯಲ್ಲಿ ಹಾಗೂ ಕುಮಾರಿ ಭವ್ಯಶ್ರೀ ೧ ನೆಯ ತರಗತಿಯಲ್ಲಿ ಓದುತ್ತಿದ್ದಾರೆ.

ಓದು ಮುಗಿದ ನಂತರ ಕೆಲವು ವರ್ಷಗಳವರೆಗೆ ಹೋಟೆಲ್ ಲಲಿತ ಮಹಲದಲ್ಲಿ ನಂತರ ಮೈಸೂರ ರೆಸ್ಟೋರೆಂಟಿನ ವ್ಯವಹಾರ ನೋಡಿಕೊಂಡರು. ವಿಜಯಪುರದ ಹೊಸ ವಿಠ್ಠಲ ಮಂದಿರದ ಹತ್ತಿರ ಇರುವ ಮನೆಯಲ್ಲಿ ಶೆಟ್ಟಿಯವರ ಅವಿಭಕ್ತ ಕುಟುಂಬ ೧೯೬೩ ರಿಂದ ನೆಲೆಸಿತ್ತು. ನಗರದ ಬೆಳವಣಿಗೆ ಆದಂತೆ ಹೊಸ ವಿಠ್ಠಲ ಮಂದಿರ ರಸ್ತೆ ವಾಣಿಜ್ಯ ಪ್ರದೇಶವಾಯಿತು. ಅಲ್ಲಿಯ ಗದ್ದಲ ಶಬ್ದಮಾಲಿನ್ಯ ಎಲ್ಲವನ್ನು ಗಮನದಲ್ಲಿ ಇಟ್ಟುಕೊಂಡು ಮನೆಯ ಸ್ಥಳದಲ್ಲಿ ಲಾಜಿಂಗ್ ನಿರ್ಮಾಣ ಮಾಡಿ ತಮ್ಮ ತಂದೆಯವರ ನೆನಪಿಗಾಗಿ ಕೆ.ಬಿ. ರೆಸಿಡೆನ್ಸಿ (ಕೆ.ಬಾಬುರಾವ್) ಅಂತಾ ನಾಮಕರಣ ಮಾಡಿ ಅಲ್ಲಿ ಕಳೆದ ಎರಡು ವರ್ಷಗಳಿಂದ ವ್ಯವಹಾರ ಆರಂಭಿಸಿದ್ದಾರೆ.

ಎಂಟನೆಯವರಾದ ಸೌ. ಸುಜಾತಾ ಇವರಿಗೆ ಸಾಣೂರು (ಕಾರ್ಕಳ) ಶ್ರೀ ಕೃಷ್ಣಾ ಶೆಟ್ಟಿ ಮತ್ತು ಸೌ. ಪ್ರೇಮಾ ಶೆಟ್ಟಿ ಇವರ ಚಿರಂಜೀವಿ ಡಾಕ್ಟರ ಅವಿನಾಶ ಇವರೊಂದಿಗೆ ದಿ. ೪-೨-೧೯೯೯ ರಂದು ವಿವಾಹವಾಯಿತು. ಡಾ. ಅವಿನಾಶ ಅವರು ಎಂ.ಬಿ. ಬಿ.ಎಸ್. ಅಧ್ಯಯನದ ನಂತರ ಮಣಿಪಾಲ ಆಸ್ಪತ್ರೆಯಲ್ಲಿ ಸೇವೆ ಮಾಡುತ್ತಾ ಎಂ.ಡಿ. ಅಧ್ಯಯನ ಮಾಡಿ, ಈಗ ಅಲ್ಲಿಯೇ ಜನಪ್ರಿಯ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ದಂಪತಿಗಳಿಗೆ ಕುಮಾರಿ ಅವಿತಾ ಕುಮಾರ ಅದ್ವಿಕ್ ಎರಡು ಮಕ್ಕಳಿದ್ದಾರೆ. ವೈದ್ಯರಾದರೂ ಓದುವ ಹವ್ಯಾಸ ಇದ್ದದ್ದು ಒಂದು ವಿಶೇಷ. ಕುಮಾರಿ ಅವಿತಾ ೧೦ ನೆಯ ತರಗತಿಯಲ್ಲಿ ಹಾಗೂ ಅದ್ವಿಕ್ ೬ನೆಯ ತರಗತಿಯಲ್ಲಿ ಓದುತ್ತಿದ್ದಾರೆ.

ಶ್ರೀ ಬಾಬುರಾವ್ ಹಾಗೂ ಶ್ರೀಮತಿ ಲಲಿತಾ ಇವರ ಕೊನೆಯ ಹಾಗೂ ಒಂಭತ್ತನೆಯವರಾದ ಸೌ. ವಿದ್ಯಾ ಪದವಿಧರಳು. ಬಿ.ಎ ಅಧ್ಯಯನದಲ್ಲಿ ಹೆಚ್ಚು ಅಂಕಗಳಿಸಿ, ಸರಕಾರಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಓದುವ ಇಚ್ಚೆಯುಳ್ಳವಳಾಗಿದ್ದಳು. ಅಧಿಕಾರಿಯಾಗುವ ಇಚ್ಛೆ ಇದ್ದವಳಿಗೆ ಒಳ್ಳೆಯ ಗೃಹಿಣಿಯಾಗುವ ಯೋಗ ಬಂದಿತು. ಬೆಂಗಳೂರಿನ ಶ್ರೀ ನಾರಾಯಣ ಶೆಟ್ಟಿ ಇವರ ಚಿರಂಜೀವಿ ಸಾಫ್ಟ್‌ವೇರ್ ಇಂಜನೀಯರಾದ ಶ್ರೀ ಪ್ರದೀಪಕುಮಾರ ಇವರೊಂದಿಗೆ ದಿನಾಂಕ ೧೦-೦೩-೨೦೦೨ರಂದು ವಿವಾಹವಾಗಿ ಈಗ ಕುಮಾರಿ ನಂದಿಕಾ ಹಾಗೂ ಕುಮಾರ ಆದಿತ್ಯ ಎರಡು ಮಕ್ಕಳ ತಾಯಿಯಾಗಿದ್ದಾಳೆ. ಕುಮಾರಿ ನಂದಿಕಾ ೭ನೆಯ ತರಗತಿಯಲ್ಲಿ ಕುಮಾರ ಆದಿತ್ಯ ೨ ನೆಯ ತರಗತಿಯಲ್ಲಿ ಓದುತ್ತಿದ್ದಾರೆ.

೪ ಗಂಡು ಮಕ್ಕಳು, ೪ ಸೊಸೆಯಂದಿರರು, ೫ ಜನ ಹೆಣ್ಣು ಮಕ್ಕಳು, ೫ ಜನ ಅಳಿಯಂದಿರು, ೧೮ ಜನಮೊಮ್ಮಕ್ಕಳೊಂದಿಗೆ ತುಂಬು ಕುಟುಂಬದಲ್ಲಿ ಯಾವ ಕೊರತೆ ಇಲ್ಲದೆ ನ್ಯಾಯ, ನೀತಿ, ಧರ್ಮ, ಸಂಸ್ಕಾರ, ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಈ ಕುಟುಂಬ ಆದರ್ಶ ಕುಟುಂಬವಾಗಿದೆ. ಈ ಪರಿವಾರ ಉತ್ತರೋತ್ತರವಾಗಿ ಸಮಾಜದಲ್ಲಿ ಮಾದರಿಯ ಕುಟುಂಬವಾಗಿ ಇನ್ನೂ ಒಳ್ಳೆಯ ಹೆಸರಿನೊಂದಿಗೆ ಹೀಗೆಯೇ ಬೆಳೆಯಲಿ ಸಮಾಜಕ್ಕೆ ಸೇವೆಸಲ್ಲಿಸಲಿ. ಎಂಬುದು ನಮ್ಮ ಆಶಯ.

■■

---

ಹಿಂದಿ ಪ್ರಾಧ್ಯಾಪಕರು ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ.ವಿಜ್ಞಾನ ಕಾಲೇಜು ವಿಜಯಪುರ. ಮೊ : ೯೪೪೪೮೧೮೫೭೦೫